81.	Shambulingeswara Silk Industries, Hallikeri Hundi	Rs. 6,500-00
82.	Shilpa Granites, & Marble Tiles, Kudlur	Rs. 40,000-00
		16,80,085-00

ಶ್ರೀ ವಾಟಾಳ್ ನಾಗರಾಜ್ : ಮಾನ್ಯ ಅಧ್ಯಕ್ಷರೆ, ಹಿಂದುಳಿದಿರತಕ್ಕ ಗಡಿ ಪ್ರದೇಶಗಳಲ್ಲಿ ಸಣ್ಣ ಕೈಗಾರಿಕೆಗಳಿಗೆ ಪ್ರೋತ್ಸಾಹ ನೀಡಿ ಅವುಗಳನ್ನು ಅಭಿವೃದ್ಧಿಪಡಿಸುವ ಉದ್ದೇಶದಿಂದ ನೀವು ಹೊಸ ಹೊಸ ಷೆಡ್ಡುಗಳನ್ನು ಹಾಕುವ ಸಲುವಾಗಿ, ನಮ್ಮ ಚಾಮರಾಜ ನಗರ ತಾಲ್ಲೂಕಿನಲ್ಲಿ ವಿಶೇಷವಾಗಿ ನೂರು ಎಕರೆ ಪ್ರದೇಶಗಳನ್ನು ಪಡೆದು ಹೊಸದಾಗಿ ಷೆಡ್ಡುಗಳನ್ನು ಕಟ್ಟಿಸತಕ್ಕ ವ್ಯವಸ್ಥೆಯನ್ನು ಈ ವರ್ಷ ಮಾಡುತ್ತೀರಾ?

ಶ್ರೀ ನಜೀರ್ ಅಹಮದ್ : ಈಗಾಗಲೇ ಚಾಮರಾಜನಗರವನ್ನು ಜೋನ್-3ರಲ್ಲಿ ಇಟ್ಟುಕೊಂಡಿದ್ದೇವೆ. ಆದುದರಿಂದ ಹಲವಾರು ಸಬ್ಸಿಡೀಸ್, ಇನ್‌ಸೆಂಟೀವ್ಸ್ ಎಲ್ಲ ಸರ್ಕಾರದಿಂದ ಹೊಸ ಕಾರ್ಯಕ್ರಮವನ್ನು ಹಾಕಿಕೊಂಡು ಹೊಸ ಯೂನಿಟ್ ಅನ್ನು ಅಂದರೆ ಷೂ ಮೇಕಿಂಗ್ ಯೂನಿಟ್ ಅನ್ನು ಅಂದರೆ ಷೂ ಮೇಕಿಂಗ್ ಯೂನಿಟ್ ಅನ್ನು ಸ್ಥಾಪನೆ ಮಾಡುತ್ತಿದ್ದೇವೆ. ಅದರಲ್ಲಿ 40 ಜನ ಬೆನಿಫಿಷರೀಸ್ ಅನ್ನು ಐಡೆಂಟಿಫೈ ಮಾಡುತ್ತಿದ್ದೇವೆ. ಅದರ ಜೊತೆಗೆ ಮಾನ್ಯ ಸದಸ್ಯರು ಏನು ಸಲಹೆ ಕೊಟ್ಟಿದ್ದಾರೆ, ಆ ಪ್ರಕಾರ ಕೂಡಲೇ ಇಂಡಸ್ಟ್ರಿಯಲ್ ಷೆಡ್ ಮಾಡುವುದಕ್ಕೆ ಕ್ರಮ ತೆಗೆದುಕೊಳ್ಳುತ್ತೇನೆ.

ಶ್ರೀ ವಾಟಾಳ್ ನಾಗರಾಜ್ : ಯಾವುದೇ ತಾಲ್ಲೂಕಾಗಲಿ ಗಡಿ ಪ್ರದೇಶದ ಬೆಳವಣಿಗೆಯ ದೃಷ್ಟಿಯಿಂದ ತಾವು ಏನಾದರೂ ವಿಶೇಷವಾದ ಯೋಜನೆ ಮಾಡುತ್ತೀರಾ? ಕೈಗಾರಿಕಾ ಬೆಳವಣಿಗೆಗೆ ಹೊಸ ಯೋಜನೆ ಮಾಡತಕ್ಕ ಆಲೋಚನೆ ಸರ್ಕಾರಕ್ಕೆ ಇದೆಯೇ?

ಶ್ರೀ ನಜೀರ್ ಅಹಮದ್ : ಈಗಾಗಲೇ ನಾನು ತಮಗೆ ಉತ್ತರ ಕೊಟ್ಟಿದ್ದೇನೆ. ರೂರಲ್ ಏರಿಯಾದಲ್ಲಿ ರೂರಲ್ ಎಂಪ್ಲಾಯ್‌ಮೆಂಟ್ ಜನರೇಷನ್‌ಗಾಗಿ ಈ ವಿಶ್ವ ಕಾರ್ಯಕ್ರಮವನ್ನು ಮಾಡುತ್ತಿದ್ದೇವೆ. ಅದರ ಜೊತೆಗೆ ನಮ್ಮ ಕರ್ನಾಟಕ ಸ್ಟೇಟ್ ಫೈನಾನ್ಸ್ ಕಾರ್ಪೋರೇಷನ್‌ನಿಂದ ಒಂದು ತಾಲ್ಲೂಕಿನಲ್ಲಿ ಒಂದು ವಿಲೇಜನ್ನು ಐಡೆಂಟಿಫೈ ಮಾಡಿ, ಬೆನಿಫಿಷರೀಸ್‌ಗೆ ಇಂಡಿವಿಜುಯಲ್ ಯೂನಿಟ್ಸ್ ಮಾಡಿಕೊಡುತ್ತಿದ್ದೇವೆ.

ಡಾ. ಬಾಬಾ ಸಾಹೇಬ್ ಅಂಬೇಡ್ಕರ್‌ರವರ ಜನ್ಮಶತಾಬ್ಧಿ ಅಂಗವಾಗಿ 1990-91ರಲ್ಲಿ ಖರ್ಚು ಮಾಡಿದ ಹಣದ ವಿವರ

2405 - ಶ್ರೀ ಎ. ರುಕ್ಮಯ್ಯ ಪೂಜಾರಿ (ವಿಟ್ಲ) : ಮಾನ್ಯ ಸಮಾಜ ಕಲ್ಯಾಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಡಾ. ಬಾಬಾ ಸಾಹೇಬ್ ಅಂಬೇಡ್ಕರ್ ಜನ್ಮಶತಮಾನೋತ್ಸವದ ಅಂಗವಾಗಿ 1990-91ನೇ ಸಾಲಿನಲ್ಲಿ ಹರಿಜನರ ಅಭಿವದ್ಧಿಗಾಗಿ ಬೇರೆ ಬೇರೆ ಉದ್ದೇಶಕ್ಕಾಗಿ ಖರ್ಚು ಮಾಡಿದ ಹಣ ಎಷ್ಟು?

ಆ) ಯಾವ ಯಾವ ಉದ್ದೇಶಕ್ಕೆ ಎಷ್ಟೆಷ್ಟು ಹಣ ಖರ್ಚು ಮಾಡಲಾಗಿದೆ?

ಇ) ಈ ಬಗ್ಗೆ ಸರ್ಕಾರ ಖರ್ಚು ಮಾಡಿರುವ ಹಣ ಕಡಿಮೆಯಾಗಿದ್ದು ಅದನ್ನು ಹೆಚ್ಚಿಸಲು ಸರ್ಕಾರಕ್ಕೆ ಇರುವ ಉದ್ದೇಶವೇನು?

ಶ್ರೀ ಬಿ. ಶಿವಣ್ಣ (ಸಮಾಜ ಕಲ್ಯಾಣ ಸಚಿವರು)

ಅ) ಡಾ. ಬಾಬಾ ಸಾಹೇಬ್ ಅಂಬೇಡ್ಕರ್‌ರವರ ಜನ್ಮಶತಾಬ್ಧಿ ಅಂಗವಾಗಿ 1991-92 ರಿಂದ 1993-94ರವರೆಗೆ ಮೂರು ವರ್ಷಗಳಲ್ಲಿ ಜಾರಿಗೊಳಿಸಲು 279.26 ಕೋಟಿ ರೂ. ವೆಚ್ಚದ 37 ವಿಶೇಷ ಕಾರ್ಯಕ್ರಮಗಳನ್ನು ರೂಪಿಸಲಾಗಿದೆ.

(ಲಕ್ಷ ರೂ.ಗಳಲ್ಲಿ)

1)	ಪರಿಶಿಷ್ಟ ಜಾತಿಯವರ ಜಾಣ್ಮೆಯನ್ನು ಅಭಿವೃದ್ಧಿಗೊಳಿಸುವ ಕಾರ್ಯಕ್ರಮ.	69.20
2)	ದೇವದಾಸಿಯರ ಪುನರ್ವಸತಿ	62.47
3)	ವಿಶೇಷ ನೀರಾವರಿ ಯೋಜನೆಗಳು	124.00
4)	ನೀರಾವರಿ ಬಾವಿಗಳ ವಿದ್ಯುದ್ದೀಕರಣ.	6.00
5)	ಪರಿಶಿಷ್ಟ ಜಾತಿಯವರಿಗೆ ಹಂಚುವ ಸಲುವಾಗಿ ಭೂಮಿ ಖರೀದಿ	30.00
		292.37

ಇ) ಈ ಯೋಜನೆಗಳನ್ನು ಅನೇಕ ಇಲಾಖೆಗಳ ಅನುಷ್ಠಾನಗೊಳಿಸುತ್ತಿರುವುದರಿಂದ ಈ ಯೋಜನೆಗಳಿಗೆ ಬೇಕಾಗುವ ಹೆಚ್ಚಿನ ಹಣವೆಷ್ಟೆಂಬುದನ್ನು ಈ ಕೂಡಲೇ ಅಂದಾಜು ಮಾಡಲು ಸಾಧ್ಯವಾಗಲಾರದು.

ಶ್ರೀ ಎ. ರುಕ್ಮಯ್ಯ ಪೂಜಾರಿ : ಡಾ. ಬಾಬಾಸಾಹೇಬ್ ಅಂಬೇಡ್ಕರ್ ಜನ್ಮಶತಮಾನೋತ್ಸವದ ಅಂಗವಾಗಿ 1990-91ನೇ ಸಾಲಿನಲ್ಲಿ ಎಷ್ಟು ಹಣ ಖರ್ಚು ಮಾಡಿದ್ದೀರಿ ಎಂದು ಕೇಳಿದ್ದಕ್ಕೆ 3 ವರ್ಷಗಳ ಅವಧಿಗೆ 279.26 ಕೋಟಿ ರೂಪಾಯಿ ಎಂದು ಹೇಳಿದ್ದಾರೆ. ಎರಡನೇ ಪ್ರಶ್ನೆಯಲ್ಲಿ ಯಾವ ಯಾವ ಉದ್ದೇಶಕ್ಕೆ ಎಷ್ಟೆಷ್ಟು ಹಣ ಖರ್ಚು ಮಾಡಿದ್ದೀರಿ ಅಂದರೆ 292.37 ಲಕ್ಷ ರೂಪಾಯಿ ಎಂದು ಹೇಳಿದ್ದಾರೆ. ಇದು ಒಂದಕ್ಕೊಂದಕ್ಕೆ ಸಂಬಂಧ ಇಲ್ಲ. ಈ ವ್ಯತ್ಯಾಸಕ್ಕೆ ಕಾರಣವೇನು ? ಪರಿಶಿಷ್ಟ ಜಾತಿಯವರ ಜಾಣ್ಮೆಯನ್ನು ಅಭಿವೃದ್ಧಿಗೊಳಿಸುವ ಕಾರ್ಯಕ್ರಮ ಎಂದು ಹೇಳಿದ್ದೀರಿ, ಈ ಕಾರ್ಯಕ್ರಮದ ವಿವರ ನಮಗೆ ಬೇಕಾಗಿದೆ. ನಮ್ಮ ಕಡೆ ಪರಿಶಿಷ್ಟ ಜಾತಿಯವರ ಹಲವಾರು ಕಾಲೋನಿಗಳು ಇವತ್ತಿನವರೆಗೆ ಸರ್ಕಾರದ ಪ್ರತಿಯೊಂದು ಸವಲತ್ತುಗಳಿಂದ ವಂಚಿತವಾಗಿದೆ. ರಸ್ತೆ ಇಲ್ಲ, ವಿದ್ಯುತ್ ಇಲ್ಲ, ಕುಡಿಯುವ ನೀರಿನ ವ್ಯವಸ್ಥೆ ಇಲ್ಲ, ಮತ್ತೂ ಅಲ್ಲಿ ಭೂತಾರಾಧನಾ ಕೇಂದ್ರಗಳು ಮತ್ತು ಭಜನಾ ಮಂದಿರಗಳಿವೆ. ಅವೂಕೂಡ ಅಜೀರ್ಣಾವಸ್ಥೆಯಲ್ಲಿವೆ. ಇದನ್ನೆಲ್ಲಾ ಸರಿ ಮಾಡುವುದಕ್ಕೆ ಸರ್ಕಾರ ಕಾರ್ಯಕ್ರಮವನ್ನು ಹಾಕಿಕೊಂಡಿದೆಯೇ? ಇದಕ್ಕಾಗಿ ಹಲವಾರು ಕೇರಿಗಳಿಂದ ಕಾಲೋನಿಗಳಿಂದ ಸರ್ಕಾರಕ್ಕೆ ಅರ್ಜಿಗಳು ಬಂದಿವೆ. ಇದನ್ನು ಸರಿಪಡಿಸುವುದಕ್ಕೆ ಸರ್ಕಾರ ಏನು ಕಾರ್ಯಕ್ರಮ ಹಾಕಿಕೊಂಡಿದೆ. ಕೆಲವಾರು ಕೇರಿಗಳನ್ನು ಗುರುತಿಸಿ, ಅದಕ್ಕೆ ರಾಷ್ಟ್ರ ನಾಯಕರ ಹೆಸರನ್ನು ಇಟ್ಟಿದ್ದಾರೆ. ಇನ್ನೂ ಹಲವಾರು ಕಡೆ ಗುರುತು ಮಾಡದಂತಹ ಕೇರಿಗಳು ಇವೆ. ಅವನ್ನು ಗುರುತು ಮಾಡಿ, ಅಭಿವೃದ್ಧಿಪಡಿಸುವುದಕ್ಕೆ ಮತ್ತು ರಾಷ್ಟ್ರನಾಯಕರ ಹೆಸರನ್ನಿಡುವ ಕಾರ್ಯಕ್ರಮ ಹಾಕಿಕೊಳ್ಳುತ್ತೀರಾ?

ಶ್ರೀ ಬಿ. ಶಿವಣ್ಣ : ಮಾನ್ಯ ಅಧ್ಯಕ್ಷರೆ, ಡಾ. ಬಾಬಾ ಸಾಹೇಬ್ ಅಂಬೇಡ್ಕರ್ ಶತಮಾನೋತ್ಸವ ಕಾರ್ಯಕ್ರಮದಲ್ಲಿ 279 ಕೋಟಿ ರೂಪಾಯಿಗಳ 37 ಸ್ಕೀಂಗಳನ್ನು

ಮಾಡಿ ಪ್ರೋಗ್ರಾಂಸ್ ಹಾಕಿದ್ದೇವೆ. ಅದರಲ್ಲಿ 29 ಪ್ರೋಗ್ರಾಂಸ್‌ಗೆ ದುಡ್ಡು ಅಲೋಕೇಟ್ ಮಾಡಿದ್ದೇವೆ. ಇನ್ನು 8 ಪ್ರೋಗ್ರಾಂಸ್‌ಗೆ ದುಡ್ಡು ಅವಶ್ಯಕತೆ ಇಲ್ಲ. ಅದು ಗೌರ್ನಮೆಂಟ್ ಸ್ಕೀಂಸ್ ಮತ್ತು ಪ್ರೋಗ್ರಾಂಸ್. ಈ ಪ್ರಕಾರ 279 ಕೋಟಿ ರೂಪಾಯಿಗಳ ಪ್ರೋಗ್ರಾಂಸ್ ಇವೆ. ಈಗ ಅವರು ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಏನು ಮಾಡಿದ್ದೀರಿ ಎಂದು ಕೇಳಿದರು. ಅವರಿಗೆ ಹೇಳಬೇಕಾದರೆ, ನಾಲ್ಕು ವರ್ಷಗಳಲ್ಲಿ ಒಂದು ಲಕ್ಷ ಮನೆಗಳನ್ನು ಉಚಿತವಾಗಿ ಕೊಡುತ್ತೇವೆಂದು ಹೇಳಿದ್ದೆವು. ಒಂದು ವರ್ಷಕ್ಕೆ 25 ಸಾವಿರ ಮನೆಗಳಂತೆ ನಾಲ್ಕು ವರ್ಷಗಳಲ್ಲಿ ಒಂದು ಲಕ್ಷ ಮನೆಗಳನ್ನು ಮುಗಿಸುವುದಕ್ಕೆ ನಾವು ಪ್ರಯತ್ನ ಮಾಡುತ್ತಿದ್ದೇವೆ. ಆ ಕಾರ್ಯಕ್ರಮದ ಪ್ರಕಾರ, ದಕ್ಷಿಣ ಕನ್ನಡ ಜಿಲ್ಲೆಯಲ್ಲಿ 25 ಸಾವಿರ ಮನೆಗಳಲ್ಲಿ 1386 ಮನೆಗಳು ಇವೆ. ಇವಕ್ಕೆ ಖರ್ಚಾಗಿರುವುದು 207 ಲಕ್ಷ ರೂಪಾಯಿಗಳು. ಸಮಾಜ ಕಲ್ಯಾಣ ಇಲಾಖೆಯಿಂದ ಖರ್ಚಾಗಿರುವುದು 157 ಲಕ್ಷ ರೂಪಾಯಿಗಳು. ಆರ್.ಡಿ.ಪಿ.ಆರ್ ಅಂದರೆ ಜಿಲ್ಲಾ ಪರಿಷತ್ತಿನಿಂದ 17,17,450 ರೂಪಾಯಿಗಳು ಖರ್ಚಾಗಿದೆ. ಈ ಪ್ರಕಾರ ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಬರುವ ದುಡ್ಡು ಸೋಷಿಯಲ್ ವೆಲ್‌ಫೇರ್ ಡಿಪಾರ್ಟ್‌ಮೆಂಟ್ ಸ್ಕೀಂನಲ್ಲಿ ಖರ್ಚು ಮಾಡುತ್ತಿದ್ದೇವೆ. ಸ್ಕಿಲ್ ಡೆವಲಪ್‌ಮೆಂಟ್, ದೇವದಾಸಿಯರ ಪುನರ್‌ವಸತಿ, ವಿಶೇಷ ನೀರಾವರಿ ಯೋಜನೆಗಳು, ನೀರಾವರಿ ಬಾವಿಗಳ ವಿದ್ಯುದ್ದೀಕರಣ, ಪರಿಶಿಷ್ಟ ಜಾತಿಯವರಿಗೆ ಹಂಚುವ ಸಲುವಾಗಿ ಭೂಮಿ-ಇದಕ್ಕೆ ಖರ್ಚು ಮಾಡಿದೆ. ತಮಗೆ ಹೇಳಬೇಕೆಂದರೆ, ಈ ಕಾರ್ಯಕ್ರಮಗಳು 10-4-91ಕ್ಕೆ ಸ್ಟಾರ್ಟ್ ಮಾಡುವವರಿದ್ದೆವು. ಅದಕ್ಕೆ ಸರಿಯಾದ ದುಡ್ಡನ್ನೂ ವ್ಯವಸ್ಥೆ ಮಾಡಿದ್ದೇವೆ. ಜಿಲ್ಲಾ ಪರಿಷತ್ ಮುಖಾಂತರ ಕೆಲವು ಕೆಲಸಗಳಾಗುತ್ತವೆ. ಕೆಲವು ಕೆಲಸಗಳು ಇಲಾಖೆ ಮುಖಾಂತರ ಆಗುತ್ತವೆ. ಈ ಪ್ರಕಾರ ಸೋಷಿಯಲ್ ವೆಲ್‌ಫೇರ್ ಡಿಪಾರ್ಟ್‌ಮೆಂಟಿನಿಂದ ಆಗುವಂಥ ಕೆಲಸಗಳನ್ನು ಅಂದರೆ ಮನೆಗಳ ವಿಷಯದಲ್ಲಿ ಬೇರೆ ವಿಷಯದಲ್ಲಿ ಎಂಟ್ರಸ್ಟ್ ಮಾಡಿಬಿಟ್ಟಿದ್ದೇವೆ. ನಮ್ಮ ಡಿಪಾರ್ಟ್‌ಮೆಂಟ್ ಜಿಲ್ಲಾ ಪರಿಷತ್ ಮೂಲಕ ಕೆಲಸ ಮಾಡಬೇಕು. ಅದಕ್ಕಾಗಿ ಜಿಲ್ಲಾ ಪರಿಷತ್ತಿಗೆ ಹೇಳಿದ್ದೇವೆ. ಅವರು ಅವರ ಮಟ್ಟದಲ್ಲಿ ಏನೇನು ಇಂಪ್ಲಿಮೆಂಟ್ ಮಾಡಬೇಕೋ ಆ ಕಾರ್ಯಕ್ರಮಗಳನ್ನು ನಡೆಸಿಕೊಂಡು ಹೋಗಬೇಕೆಂದು ಹೇಳಿದ್ದೇವೆ. ಆ ಕಾರ್ಯಕ್ರಮದ ಪಟ್ಟಿ ನಾನು ಓದಬೇಕು ಎಂದರೆ ಓದುತ್ತೇನೆ. ಬಹುಶಃ ಎಲ್ಲ ಮಾನ್ಯ ಸದಸ್ಯರಿಗೆ ಆ ಸ್ಕೀಂಸ್ ಗೊತ್ತಿರಬಹುದು. ಮೊದಲನೇ ಸಾರಿ ಕರ್ನಾಟಕದಲ್ಲಿ ಒಂದು ಲಕ್ಷ ಮನೆಗಳನ್ನು ಡಾ. ಅಂಬೇಡ್ಕರ್ ಶತಮಾನೋತ್ಸವ ಸಂದರ್ಭದಲ್ಲಿ ನಾವು ಮಾಡಿದ್ದೇವೆ. ಎಸ್.ಸಿ.ಪಿ. ಫಂಡ್ಸ್ ಮೇಲೆ 32 ಡೆವಲಪ್‌ಮೆಂಟ್ ಡಿಪಾರ್ಟ್‌ಮೆಂಟ್ಸ್ ಇರುತ್ತದೆ. ಆ ಡೆವಲಪ್‌ಮೆಂಟ್ ಡಿಪಾರ್ಟ್‌ಮೆಂಟ್ ಮುಖಾಂತರ ಸಾಕಷ್ಟು ಕೆಲಸಗಳನ್ನು ನಾವು ಮಾಡುತ್ತಿದ್ದೇವೆ. ಮಾನ್ಯ ರುಕ್ಕಯ್ಯ ಪೂಜಾರಿಯವರು ಹೇಳಿದ ರೋಡ್ಸ್ ಎಲ್ಲಾ ಜಿಲ್ಲಾ ಪರಿಷತ್ತಿಗೆ ಬರುತ್ತದೆ. ಡೆವಲಪ್‌ಮೆಂಟ್ ಡಿಪಾರ್ಟ್‌ಮೆಂಟ್ಸ್‌ಗೆ ನಾವು ಹಣ ಎಸ್.ಸಿ.ಪಿ ಫಂಡ್ಸ್‌ನಲ್ಲಿ ಕೊಟ್ಟಿರುತ್ತೇವೆ. ಆ ಫಂಡ್ಸ್‌ನಲ್ಲಿ ಜಿಲ್ಲಾ ಪರಿಷತ್ ಮುಖಾಂತರ ಖರ್ಚು ಮಾಡುತ್ತಾರೆ. ನಮಗೆ ಏನು ಇನ್‌ಫರ್ಮೇಷನ್ ಬರುತ್ತದೋ ಅದನ್ನು ನಾವು ಹೇಳುತ್ತೇವೆ. ತಾವು ಜಿಲ್ಲಾ ಪರಿಷತ್ತಿಗೆ ಡೈರೆಕ್ಷನ್ ಕೊಡಬೇಕು ಎಂದರೆ ಕೊಡುತ್ತೇವೆ. ಡಾ. ಅಂಬೇಡ್ಕರ್ ಭವನಕ್ಕೆ 5 ಲಕ್ಷ ರೂಪಾಯಿ ಜಿಲ್ಲಾ ಪರಿಷತ್ತಿನಿಂದ ನಾವು ಕೊಡಿಸಿದ್ದೇವೆ.

ಶ್ರೀ ಎ. ರುಕ್ಕಯ್ಯ ಪೂಜಾರಿ : ಪರಿಶಿಷ್ಟ ಜಾತಿಯವರ ಜಾಣ್ಮೆಯನ್ನು ಅಭಿವೃದ್ಧಿ ಪಡಿಸುವ ದೃಷ್ಟಿಯಿಂದ ಎಂದು ಹೇಳಿದ್ದಾರೆ. ಅದೇನು ಎಂದು ನನಗೆ ಅರ್ಥವಾಗುತ್ತಿಲ್ಲ.

ಶ್ರೀ ಬಿ. ಶಿವಣ್ಣ : ಸಾಕಷ್ಟು ಜನರಿಗೆ ನಾವು ಕಂಪ್ಯೂಟರ್ ಟ್ರೈನಿಂಗ್ ಕೊಡುತ್ತಿದ್ದೇವೆ. ಎಂಪ್ಲಾಯ್ಮೆಂಟ್ ಟ್ರೈನಿಂಗ್, ಇಂಡಸ್ಟ್ರಿಯಲ್ ಟ್ರೈನಿಂಗ್ ಕೊಡುತ್ತಿದ್ದೇವೆ.

ಶ್ರೀಮತಿ ಮೋಟಮ್ಮ : ಮಾನ್ಯ ಅಧ್ಯಕ್ಷರೆ, ಮಾನ್ಯ ಮಂತ್ರಿಗಳು ಪ್ರೋಗ್ರಾಂಸ್ ಏನು ಹೇಳಿದರು, ಅದಕ್ಕಿಂತ ಮುಖ್ಯವಾಗಿ ಮಾನ್ಯ ರುಕ್ಕಯ್ಯ ಪೂಜಾರಿಯವರು ಹೇಳಿದ ಹಾಗೆ, ಎಷ್ಟೋ ಹರಿಜನ ಬಸದಿಗಳಿಗೆ ವಿದ್ಯುತ್ ದೀಪ ಕೊಟ್ಟಿಲ್ಲ, ರಸ್ತೆ ಇಲ್ಲ, ಕುಡಿಯಲಿಕ್ಕೆ ನೀರು ಇಲ್ಲ, ಈ ಪ್ರೋಗ್ರಾಂನಲ್ಲಿ ಈ ಮೂರು ಐಟಂ ಅನ್ನು ಸೇರಿಸಿ ಅದಕ್ಕೆ ಆದ್ಯತೆ ಕೊಟ್ಟಿದ್ದರೆ ಬಹಳ ಉತ್ತಮವಾದ ಕಾರ್ಯ ಮಾಡಿದಂತಾಗುತ್ತಿತ್ತು. ಈಗಲಾದರೂ ಸೇರಿಸುವುದಕ್ಕೆ ಸಾಧ್ಯವೆ ಎಂದು ನಾನು ಕೇಳುತ್ತೇನೆ.

ಶ್ರೀ ಬಿ. ಶಿವಣ್ಣ : ನನ್ನ ಇಲಾಖೆಗೆ ಸಂಬಂಧಪಟ್ಟಿದ್ದು ನಾನು ಹೇಳಬಹುದು. ಎಲೆಕ್ಟ್ರಿಸಿಟಿ ಕೆ.ಇ.ಬಿ.ಗೆ ಸಂಬಂಧಪಟ್ಟಿದ್ದು. ಷೆಡ್ಯೂಲ್ಡ್ ಕ್ಯಾಸ್ಟ್‌ನವರಿಗೆ ಸಾಕಷ್ಟು ಸವಲತ್ತು ಕೊಡಬೇಕು ಮತ್ತು ಎಲೆಕ್ಟ್ರಿಫಿಕೇಷನ್ ಮಾಡಬೇಕು ಎಂಬ ಆದೇಶ ಕೊಡುತ್ತೇವೆ. ಅಷ್ಟೇ ಹೊರತು, ನಮ್ಮ ಇಲಾಖೆಯಿಂದ ಎಲೆಕ್ಟ್ರಿಸಿಟಿ ಸಪ್ಲೈ ಮಾಡುವ ಕೆಲಸವನ್ನು ಮಾಡುವುದಕ್ಕಾಗುವುದಿಲ್ಲ.

SRI JOSHI SUBASH SRIDHAR : The Hon'ble Minister says allocation has been made for rehabilitation of Devadasis. I would like to know whether the amount has been released by government for spending on the schemes. What are the programmes for rehabilitation of Devadasis?

ಶ್ರೀ ಬಿ. ಶಿವಣ್ಣ : ದೇವದಾಸಿ ಪ್ರೋಗ್ರಾಂ ಸಲುವಾಗಿ ನಾವು ಕೆಲವು ಡಿಸ್ಟ್ರಿಕ್ಟ್ಸ್ ಐಡೆಂಟಿಫೈ ಮಾಡಿದ್ದೇವೆ. ಬೆಳಗಾಂ, ಧಾರವಾಡ, ಬಿಜಾಪುರ, ರಾಯಚೂರು, ಗುಲ್ಬರ್ಗದ ಕೆಲವು ಭಾಗ ಗುರುತು ಮಾಡಿದ್ದೇವೆ. ಈ ಪ್ರಕಾರ ನಾಲ್ಕೈದು ಜಿಲ್ಲೆಗಳಲ್ಲಿ ದೇವದಾಸಿ ಸಮಸ್ಯೆ ಇದೆ. ಪುನರ್‌ವಸತಿ ಕಾರ್ಯಕ್ರಮದಲ್ಲಿ 2-3 ಎಕರೆ ಭೂಮಿ ದೇವದಾಸಿಯರಿಗೆ ಕೊಡುತ್ತಿದ್ದೇವೆ. ಅವರ ಮಕ್ಕಳಿಗೆ ವಿದ್ಯಾಭ್ಯಾಸದ ಸವಲತ್ತುಗಳನ್ನು ಕೊಡುತ್ತಿದ್ದೇವೆ. ಅವರಿಗೆ ಉದ್ಯೋಗ ಕೊಡುವ ಸಲುವಾಗಿ ಮೊನ್ನೆ ಬಿಜಾಪುರದಲ್ಲಿ ವೀವಿಂಗ್ ಸೆಂಟರ್ಸ್ ಸ್ಥಾಪನೆ ಮಾಡಿದ್ದೇವೆ. ಈ ಪ್ರಕಾರ ಸಾಕಷ್ಟು ಕಾರ್ಯಕ್ರಮಗಳನ್ನು ದೇವದಾಸಿ ಪುನರ್ವಸತಿ ಕಾರ್ಯಕ್ರಮದಲ್ಲಿ ಹಾಕಿದ್ದೇವೆ ಎಂದು ಹೇಳಬಯಸುತ್ತೇನೆ. ನನ್ನ ಡಿಮಾಂಡ್ ಬಗ್ಗೆ ಬಂದಾಗ ಎಲ್ಲವನ್ನೂ ಚರ್ಚೆ ಮಾಡುವುದಕ್ಕೆ ಅವಕಾಶವಾಗುತ್ತದೆ. ಈಗ ದಕ್ಷಿಣ ಕನ್ನಡಕ್ಕೆ ಸಂಬಂಧಪಟ್ಟಹಾಗೆ ಪ್ರೋಗ್ರಾಮ್ಸ್‌ನ್ನು ಹೇಳುತ್ತಿದ್ದೇನೆ.

ಶ್ರೀಮತಿ ಮಲ್ಲಾಜಮ್ಮ : ಸಮಾಜ ಕಲ್ಯಾಣ ಇಲಾಖೆಯಿಂದ ವಿದ್ಯುತ್‌ಗೋಸ್ಕರ ಹಣವನ್ನು ಬಿಡುಗಡೆ ಮಾಡಿದ್ದೀರಾ?

ಶ್ರೀ ಬಿ. ಶಿವಣ್ಣ : ಇವತ್ತು ನಮ್ಮಲ್ಲಿ 32 ಡೆವಲಪ್‌ಮೆಂಟ್ ಡಿಪಾರ್ಟ್‌ಮೆಂಟ್‌ಗಳು ಇವೆ. ಸ್ಪೆಷಲ್ ಕಾಂಪೊನೆಂಟ್ ಫಂಡ್ ಏನಿದೆ ಅದನ್ನು ಡಿವೈಡ್ ಮಾಡಿ ಎಸ್‌ಸಿಎಸ್‌ಟಿ ಡೆವಲಪ್‌ಮೆಂಟ್ ಪ್ರೊಗ್ರಾಮ್‌ಗಳನ್ನು ಹಾಕುತ್ತೇವೆ. ಸೋಷಿಯಲ್ ವೆಲ್‌ಫೇರ್ ಡಿಪಾರ್ಟ್‌ಮೆಂಟ್ ಸೂಪರ್‌ವೈಸರಿ ಡಿಪಾರ್ಟ್‌ಮೆಂಟ್ ಇದೆ. ಅವರಿಗೆ ಲೆಟರ್ ಬರೆದು ಕಾರ್ಯಕ್ರಮ ಹಾಕಿದ್ದಾರೋ ಇಲ್ಲವೋ ಎಂದು ಸರ್ಕಾರಕ್ಕೆ ಒತ್ತಾಯ ಮಾಡಬಹುದು. ಅಷ್ಟೇ ಹೊರತು ಎಲೆಕ್ಟ್ರಿಸಿಟಿ ಡಿಪಾರ್ಟ್‌ಮೆಂಟ್ ನಮ್ಮ ಕಂಟ್ರೋಲ್‌ನಲ್ಲಿ ಇಲ್ಲ. ಎಲೆಕ್ಟ್ರಿಸಿಟಿ ಕೊಡುವ ಪ್ರೋಗ್ರಾಮ್ ನಮ್ಮ ಹತ್ತಿರ ಇಲ್ಲ.

ಶ್ರೀ ಬಿ.ಹೆಚ್. ಬನ್ನಿಕೋಡ್ : ಡಾ: ಬಾಬಾ ಸಾಹೇಬ್ ಅಂಬೇಡ್ಕರ್ ಜನ್ಮ ಶತಮಾನೋತ್ಸವದ ಅಂಗವಾಗಿ ರಾಜ್ಯದಲ್ಲಿ ಪರಿಶಿಷ್ಟಜಾತಿಯ ಜನರಿಗೆ ಎಷ್ಟು ಮನೆಗಳನ್ನು ಕಟ್ಟಬೇಕೆಂದು ಸರ್ಕಾರ ಯೋಜನೆ ಹಾಕಿಕೊಂಡಿದೆ.?

ಅಧ್ಯಕ್ಷರು : ಒಂದು ಲಕ್ಷ.

ಶ್ರೀ ಬಿ.ಹೆಚ್. ಬನ್ನೀಕೋಡ್ : ಎಷ್ಟು ಮನೆಗಳನ್ನು ಕಟ್ಟಬೇಕೆಂದು ಕಾರ್ಯಕ್ರಮ ಹಾಕಿಕೊಂಡಿದ್ದೀರಿ ಅದಕ್ಕೆ ಹಣ ಬಿಡುಗಡೆ ಆಗಿಲ್ಲ. ಆ ಹಣ ಬಿಡುಗಡೆಯಾಗಿದ್ದರೆ ತಿಳಿಸಬೇಕು.

ಶ್ರೀ ಬಿ. ಶಿವಣ್ಣ : ಆ ಪ್ರೋಗ್ರಾಮ್‌ನಲ್ಲಿ ದುಡ್ಡಿನ ವ್ಯವಸ್ಥೆ ಮಾಡಿದ್ದೇನೆ. ಆರ್‌ಡಿಪಿಆರ್‌ನವರು ಕನ್‌ಸ್ಟ್ರಕ್ಷನ್ ಏಜೆನ್ಸಿಗಳಾದ ಲ್ಯಾಂಡ್ ಆರ್ಮಿ ಅಥವಾ ಲೋಕೋಪಯೋಗಿ ಇಲಾಖೆ ಮುಖಾಂತರ ಕನ್‌ಸ್ಟ್ರಕ್ಷನ್ ಮಾಡಬೇಕು. ದುಡ್ಡಿನ ವ್ಯವಸ್ಥೆ ನಾವು ಮಾಡಿದ್ದೇವೆ.

ಶ್ರೀ ಪಿ.ಜಿ.ಆರ್. ಸಿಂಧ್ಯ : ಸಮಾಜ ಕಲ್ಯಾಣ ಇಲಾಖೆಗೆ ಸಂಬಂಧಪಟ್ಟಹಾಗೆ ಉತ್ತರ ಕೊಡಬೇಕಾಗಿ ಬಂದದ್ದು ಮಾನ್ಯ ಶಿವಣ್ಣನವರ ದುರ್ದೈವ. ಡಾ : ಬಾಬಾ ಸಾಹೇಬ ಅಂಬೇಡ್ಕರ್ ಜನ್ಮ ಶತಮಾನೋತ್ಸವಕ್ಕೆ ಸಂಬಂಧಪಟ್ಟಹಾಗೆ, ಮುಖ್ಯಮಂತ್ರಿಗಳ ಅಧ್ಯಕ್ಷತೆಯಲ್ಲಿ ಒಂದು ಹೈ ಪವರ್ ಕಮಿಟಿ ಮಾಡಿ, ಅದರ ಮೂಲಕ ಹಾಕಿಕೊಂಡು ಯೋಜನೆಗಳನ್ನೆಲ್ಲಾ ಬರೀ ಪೇಪರ್ ಮೇಲೆ ಇಟ್ಟಿದ್ದಾರೆಯೇ ಹೊರತು ಸರ್ಕಾರದಿಂದ ಒಂದು ಪೈಸೆ ಕೂಡ ಈ ಕಾರ್ಯಕ್ರಮಕ್ಕೆ ಬಿಡುಗಡೆ ಮಾಡಿಲ್ಲ. ಈ ಸೆಂಟೆನರಿ ಸೆಲಬ್ರೆಷನ್ ಮುಗಿಯುತ್ತಾ ಬಂತು. 37 ಕಾರ್ಯಕ್ರಮಗಳ ಬಗ್ಗೆ ಮಾನ್ಯ ಮಂತ್ರಿಗಳು ಏನು ವಿಶ್ಲೇಷಣೆ ಮಾಡುತ್ತಿದ್ದಾರೆ ಅದು ಕೇವಲ ಪೇಪರ್ ನಲ್ಲಿ ಅಧಿಕಾರಿಗಳು ಫೈಲ್‌ನಲ್ಲಿ ಇರತಕ್ಕ ವಿಚಾರ. ಆದುದರಿಂದ ಮಾನ್ಯ ಸಮಾಜ ಕಲ್ಯಾಣ ಮಂತ್ರಿಗಳನ್ನು ಒತ್ತಾಯ ಮಾಡುವುದು ಏಕೆಂದರೆ, ಒಂದೂವರೆ ಕೋಟಿ ರೂಪಾಯಿಗಳಲ್ಲಿ ಅಂಬೇಡ್ಕರ್ ಭವನ ಕಟ್ಟಬೇಕೆಂದು ನಾವು ಅಲ್ಲಿ ಹೋಗಿ ಅಡಿಗಲ್ಲನ್ನು ಹಾಕಿದ್ದೆವು. ಅದು ಸಾಲುವುದಿಲ್ಲ ಎಂದು ಹೇಳಿ. ಆ ಕಲ್ಲನ್ನು ಕಿತ್ತುಹಾಕಿ ಇವರ ಹೆಸರು ಹಾಕಿಸಬೇಕೆಂದು ಹೇಳಿ ಇವರು ಮತ್ತೊಂದು ಕಾರ್ಯಕ್ರಮ ಮಾಡಿದರು. ಅದು ಇನ್ನೂ ಪ್ರಾರಂಭವಾಗಿಲ್ಲ. ಸುಮ್ಮನೆ ಬಜೆಟ್‌ನಲ್ಲಿ ದುಡ್ಡು ಕೊಟ್ಟಿದ್ದೇನೆ ಎಂದು ಜನರನ್ನು ತಪ್ಪುದಾರಿಗೆ ಎಳೆಯುವುದಕ್ಕೆ ಸರ್ಕಾರದವರು ಪ್ರಯತ್ನ ಮಾಡುತ್ತಿದ್ದಾರೆ. ಆದ್ದರಿಂದ ಮಾನ್ಯ ಮಂತ್ರಿಗಳು ಮಾನ್ಯ ಮುಖ್ಯಮಂತ್ರಿಗಳ ಮೇಲೆ ಒತ್ತಾಯ ತಂದು ಈಗಲಾದರೂ ಅಂಬೇಡ್ಕರ್ ಜನ್ಮ ಶತಮಾನೋತ್ಸವಕ್ಕೆ ಕೊನೆಪಕ್ಷ ಕೇಂದ್ರ ಸರ್ಕಾರದಿಂದ ಬಂದಿರತಕ್ಕ ಹಣವನ್ನಾದರೂ ಖರ್ಚು ಮಾಡುವುದಕ್ಕೆ ಕಾರ್ಯಕ್ರಮ ಹಾಕುವುದಕ್ಕೆ ಹಣ ಬಿಡುಗಡೆ ಮಾಡುವುದಕ್ಕೆ ಏನು ತೊಂದರೆ?

ಶ್ರೀ ಬಿ. ಶಿವಣ್ಣ : ತೊಂದರೆ ಏನಿಲ್ಲ. ಅವರು ಕಲ್ಲು ಹಾಕಿ ಹೋದರು.

ಶ್ರೀ ಪಿ.ಜಿ. ಆರ್. ಸಿಂಧ್ಯಾ : ಏನು ಮಾಡಲಿ, ಒಂದು ತಿಂಗಳಲ್ಲಿ ಸರ್ಕಾರ ಹೋಯಿತು. ಇಲ್ಲದಿದ್ದರೆ ಕಟ್ಟಿಸುತ್ತಿದ್ದೆವು.

ಶ್ರೀ ಬಿ. ಶಿವಣ್ಣ : ಆ ಕಲ್ಲು ತೆಗೆಸಬೇಕೆಂಬ ಉದ್ದೇಶ ಇಲ್ಲ. ದೇಶದಲ್ಲಿ ಎಷ್ಟೋ ಕಲ್ಲುಗಳು ಇವೆ. ಅವುಗಳನ್ನೆಲ್ಲಾ ತೆಗೆಸುವುದಕ್ಕಾಗುವುದಿಲ್ಲ. ಯಾವ ಯಾವ ಕಲ್ಲು ಹಾಕಬೇಕೆನ್ನುವುದು ಅವರವರ ಅದೃಷ್ಟ. ಆದರೆ ಅಂಬೇಡ್ಕರ್ ಭವನ ಕಟ್ಟಲಿಕ್ಕಾಗಿ ನಾಲ್ಕೂವರೆ ಕೋಟಿ ರೂಪಾಯಿಗಳನ್ನು ಇಟ್ಟಿದ್ದೇವೆ. ರೀಮಾಡಲಿಂಗ್ ಮಾಡಿ..

ಅಧ್ಯಕ್ಷರು : ಅದಕ್ಕೆ ಒಂದು ಅಡಿಷನಲ್ ಕಲ್ಲು ನೀವು ಹಾಕಿದಿರಿ.

ಶ್ರೀ ಬಿ. ಶಿವಣ್ಣ : ಹಾಕಿಲ್ಲ. ಕೆಲಸ ಪ್ರಾರಂಭವಾಗಲಿ ಎಂದು ನಾವು ಗುದ್ದಲಿ ಪೂಜೆ ಮಾಡಿಸಿದೆವು.

ಶ್ರೀ ಪಿ.ಜಿ.ಆರ್. ಸಿಂಧ್ಯಾ : ಕಲ್ಲು ಹಾಕುವುದಕ್ಕೆ ಒಂದು ಗುದ್ದಲಿ ಪೂಜೆ, ಹೆಸರು ಹಾಕಿಸುವುದಕ್ಕೆ ಒಂದು ಗುದ್ದಲಿ ಪೂಜೆ. ನಮ್ಮ ಸರ್ಕಾರದಲ್ಲಿ ಕಲ್ಲು ಹಾಕಿದ್ದು ಎನ್ನುವ ಹೆಸರು ನಮಗೇನು ಬೇಕಾಗಿಲ್ಲ. ನಮ್ಮ ಸರ್ಕಾರ ಬರುವುದಕ್ಕಿಂತಾ ಮೊದಲು ನೀವು ಕಲ್ಲು ಹಾಕಿದ್ದರಲ್ಲಾ, ಅದನ್ನೆಲ್ಲಾ ಕಿತ್ತು ಹಾಕಬಹುದಿತ್ತಲ್ಲವೇ? ಸರ್ಕಾರ ಯಾವಾಗಲೂ ಸ್ಥಿರವಾಗಿರುತ್ತದೆ. ನಾವು ನೀವು ಎಷ್ಟು ದಿವಸ ಇರುತ್ತೇವೆ? ಅದು ಹೋಗಲಿ, ಕಲ್ಲು ತೆಗೆದಮೇಲೆ ಕನ್‌ಸ್ಟ್ರಕ್ಷನ್ ಶುರು ಮಾಡಿದ್ದಾರೆಯೇ? ಈ ಬಗ್ಗೆ ನಾನು ನಿಮ್ಮನ್ನು ಕೇಳುತ್ತಿಲ್ಲ, ನಿಮ್ಮ ಮುಖ್ಯ ಮಂತ್ರಿಗಳನ್ನು ಈ - ಮೂಲಕ ಕೇಳುತ್ತಿದ್ದೇನೆ.

ಶ್ರೀ ಬಿ. ಶಿವಣ್ಣ : ಹಣದ ವ್ಯವಸ್ಥೆ ಇರಲಿಲ್ಲ. ನಾವು ಬಂದ ಮೇಲೆ ನಾಲ್ಕುವರೆ ಕೋಟಿ ರೂಪಾಯಿ ದುಡ್ಡು ಜಮಾ ಮಾಡಿ..

Mr. SPEAKER : Let us put the record straight ನೀವು ಕಲ್ಲು ತೆಗೆದಿರಾ?

ಶ್ರೀ ಬಿ. ಶಿವಣ್ಣ : ನಾನು ಕಲ್ಲು ತೆಗೆದಿಲ್ಲ, ಹೊಸ ಕಲ್ಲನ್ನೂ ಹಾಕಿಲ್ಲ; ಹಳೆಯದನ್ನೂ ತೆಗೆದಿಲ್ಲ.

ಶ್ರೀ ವಾಟಾಳ್ ನಾಗರಾಜ್ : ಮಾನ್ಯ ಅಧ್ಯಕ್ಷರೆ, ನನ್ನದು ಒಂದೇ ಪ್ರಶ್ನೆ. ಡಾ:ಅಂಬೇಡ್ಕರ್‌ರವರ ಜನ್ಮ ಶತಾಬ್ದಿಯ ಅಂಗವಾಗಿ ಬಹಳ ಉದ್ದುದ್ದ ವಾದಂತಹ ಭಾಷಗಳಾಯಿತು. ಪ್ರಾರಂಭದಲ್ಲಿ ತಾವು ಎಲ್ಲೆಲ್ಲಿ ಭಾಷಣಗಳನ್ನು ಮಾಡಿದ್ದೀರಿ ಅದರದು ಒಂದು ವರದಿ ಬಂದಿದೆ. ಇದನ್ನೆಲ್ಲ ನೋಡಿದರೆ ನೀವು ಅಂಬೇಡ್ಕರ್‌ರವರ ಬಗ್ಗೆ ಇಷ್ಟೊಂದು ಕಾಳಜಿಯನ್ನು ಇಟ್ಟುಕೊಂಡಿದ್ದೀರೋ ಅಥವಾ ಬರೀ ಪ್ರಚಾರವೋ ಅಥವಾ ಬುರುಡೆಯೋ ಏನು ಅನ್ನುವುದು ಈಗ ಅರ್ಥವಾಗುತ್ತಿದೆ. 1 ಲಕ್ಷ ಮನೆಗಳನ್ನ ಕಟ್ಟಿಸುತ್ತೇವೆಂದು ಹೇಳಿದ್ದೀರಲ್ಲ, ಅದರಲ್ಲಿ ಎಷ್ಟು ಮನೆಗಳನ್ನು ಕಟ್ಟಿದ್ದೀರಿ? ಮನೆಗಳನ್ನು ಕಟ್ಟುವುದಕ್ಕೆ ನಿಮ್ಮ ಕಾರ್ಯಕ್ರಮಗಳೇನು? ಎಲ್ಲೆಲ್ಲಿ ಮನೆಗಳನ್ನು ಕಟ್ಟಲಿಕ್ಕೆ ಕಾರ್ಯಕ್ರಮಗಳನ್ನು ಹಾಕಿಕೊಂಡಿದ್ದೀರಿ? ಮಾನ್ಯ ಅಧ್ಯಕ್ಷರೆ, ನಾನು ಈ ಕಲ್ಲುಗಳ ಬಗ್ಗೆ ಹೇಳುತ್ತಿದ್ದೇನೆ. ಇದು ಬಹಳ ಗಹನವಾದ ವಿಚಾರ. ಎಲ್ಲರ ಕಾಲದಲ್ಲೂ ಹಾಕಿರತಕ್ಕ ಕಲ್ಲುಗಳು ಎಲ್ಲೆಲ್ಲಿ ಏನೇನು ಆಗಿವೆ ಎಂಬುದನ್ನು ತನಿಖೆ ನಡೆಸುವುದಕ್ಕೋಸ್ಕರ ಸರ್ಕಾರ ಒಂದು ಆಯೋಗವನ್ನು ರಚನೆ ಮಾಡುತ್ತದೆಯೇ ಎಂದು ತಮ್ಮ ಮೂಲಕ ಕೇಳುತ್ತೇನೆ.

ಅಧ್ಯಕ್ಷರು : ಬೇಕಾದರೆ, ಸದನ ಸಮಿತಿಯನ್ನು ತಮ್ಮ ಅಧ್ಯಕ್ಷತೆಯಲ್ಲಿ ಮಾಡೋಣ.

ಶ್ರೀ ವಾಟಾಳ್ ನಾಗರಾಜ್ : ತಾವು ಅಪ್ಪಣೆ ಕೊಡಿಸುವುದಾದರೆ, ನಾನು ಸದನ ಸಮಿತಿಯ ಅಧ್ಯಕ್ಷನಾಗುವುದಕ್ಕೆ ತಯಾರಾಗಿದ್ದೇನೆ.

ಶ್ರೀ ಬಿ. ಶಿವಣ್ಣ : ಮಾನ್ಯ ಅಧ್ಯಕ್ಷರೆ, ಮಾನ್ಯ ಸದಸ್ಯರಿಗೆ ಇನ್ನು ಮುಂದೆ ಯಾವ ತರಹವಾದ ಅನುಮಾನ ಇರುವುದು ಬೇಕಾಗಿಲ್ಲ. ಏಕೆಂದರೆ ದುಡ್ಡು ನಮ್ಮ ಹತ್ತಿರ ಇದೆ. ಬರುವ ನವೆಂಬರ್ ತಿಂಗಳಿನಿಂದ ನಾವು ಕಾರ್ಯಕ್ರಮವನ್ನು ಶುರು ಮಾಡುತ್ತಿದ್ದೇವೆ. ನಮಗೆ ನಿವೇಶನದ ತೊಂದರೆಯಾಗಿದೆ. ಈಗ ಸಮಾಜ ಕಲ್ಯಾಣ ಇಲಾಖೆಯ ಲ್ಯಾಂಡ್ ಅಕ್ವೈರ್ ಮಾಡುವುದಕ್ಕಾಗುವುದಿಲ್ಲ. ನಾವು ರೆವಿನ್ಯೂ ಡಿಪಾರ್ಟ್‌ಮೆಂಟಿಗೆ ಹೇಳಬೇಕಾಗುತ್ತದೆ. ಅವರು ಲ್ಯಾಂಡ್ ಅಕ್ವೈರ್ ಮಾಡಬೇಕಾಗುತ್ತದೆ. ನಮ್ಮಲ್ಲಿ ಹಣವಿದೆ. ಹಣ ರೆಡಿಮಾಡಿ ಇಟ್ಟುಕೊಂಡಿದ್ದೇವೆ. ಇಲ್ಲದಿದ್ದರೆ ನಾವು ಏತಕ್ಕೆ ಭಾಷಣ ಮಾಡುತ್ತೇವೆ?

ಶ್ರೀ ವಾಟಾಳ್ ನಾಗರಾಜ್ : ನೀವು ಸುಮ್ಮನೆ ಮಾತನಾಡುತ್ತೀರಿ?

ಶ್ರೀ ಬಿ. ಶಿವಣ್ಣ : ನಾನು ಮಾತನಾಡುವವನೇ ಅಲ್ಲ, ನಾನು ಭಾಷಣ ಮಾಡುವುದು ಇಲ್ಲ, ನನಗೆ ಮಾತನಾಡುವ ಚಟವೂ ಇಲ್ಲ.

ಶ್ರೀ ವಾಟಾಳ್ ನಾಗರಾಜ್ : ಅಂಬೇಡ್ಕರ್‌ರವರ ಬಗ್ಗೆ ನೀವು ಮಾತನಾಡಿದ್ದು ಮಾತನಾಡಿದ್ದೆ. ತಮಟೆ ಹೊಡೆದು ಊರೆಲ್ಲ ಹೇಳಿದಿರಿ. ವಿಧಾನಸೌಧದ ಮುಂದೆ ನೂರಾರು ಕುರ್ಚಿಗಳನ್ನು ಹಾಕಿ ಕುಳಿತು ಕೊಂಡು ದೇಶಕ್ಕೆ ಹೇಳಿದ್ದೂ ಹೇಳಿದ್ದೆ. ಹರಿಜನೋದ್ಧಾರ ಮಾಡಿದ್ದೂ ಮಾಡಿದ್ದೆ.

ಅಧ್ಯಕ್ಷರು : ಅವರ ಮೇಲೆ ಕೋಪ ಮಾಡಿಕೊಂಡಿದ್ದೀರಾ? ಅವರ ಮೇಲೆ ಕೋಪ ಮಾಡಿಕೊಳ್ಳುವುದು ಬೇಡ.

ಶ್ರೀ ವಾಟಾಳ್ ನಾಗರಾಜ್ : ಮಾನ್ಯ ಶಿವಣ್ಣನವರ ಮೇಲೆ ಕೋಪ ಏತಕ್ಕೆ ಸ್ವಾಮಿ. ಅವರ ಮೇಲೆ ಕೋಪ ಮಾಡಿಕೊಂಡು ನನಗೇನಾಗಬೇಕು? ಅದರಲ್ಲೂ ಅವರು ಬ್ರಹ್ಮಚಾರಿಗಳು, ಅವರ ಮೇಲೆ ನನ್ನ ಕೋಪ ಏತಕ್ಕೆ ಬೇಕು.

ಶ್ರೀ ಬಿ. ಶಿವಣ್ಣ : ಇದರಲ್ಲಿ ನಾವು ಸರಿಯಾದ ಹಣದ ವ್ಯವಸ್ಥೆಯನ್ನು ಮಾಡಿದ್ದೇವೆ. ಮನೆಗಳನ್ನು ಕಟ್ಟಲಿಕ್ಕೆ ಆರ್‌ಡಿಪಿಆರ್ ಮಿನಿಸ್ಟರ್‌ರವರಿಗೆ ವಹಿಸಿಕೊಟ್ಟಿದ್ದೇವೆ.

ಅಧ್ಯಕ್ಷರು : ನಿಮ್ಮ ಕಡೆಗೆ ಎಷ್ಟು ಹಣವಿದೆ?

ಶ್ರೀ ಬಿ. ಶಿವಣ್ಣ : ನಮ್ಮ ಕಡೆಗೆ 150 ಕೋಟಿ ರೂಪಾಯಿಹಣವನ್ನು ನಾಲ್ಕು ವರ್ಷಗಳಲ್ಲಿ ಖರ್ಚು ಮಾಡಬೇಕಾಗಿದೆ.

ಅಧ್ಯಕ್ಷರು : ಈಗ ನಿಮ್ಮ ಕೈಯಲ್ಲಿ ಹಣ ಇದೆಯೇ?

ಶ್ರೀ ಬಿ. ಶಿವಣ್ಣ : ಒಂದು ಮಾತನ್ನು ಹೇಳಿದರೆ, ತಾವು ಅಪ್ರಿಸಿಯೇಟ್ ಮಾಡುತ್ತೀರಿ. 30 ಕೋಟಿ 16 ಲಕ್ಷ ರೂಪಾಯಿ ಖರ್ಚಾಗದೇ ಹಾಗೆಯೇ ಇತ್ತು. ಅದು ಮಾರ್ಚಿ ಬಂದರೆ ಮುಗಿದುಹೋಗುತ್ತದೆಂದು ತಿಳಿದುಕೊಂಡು ಶ್ರೀಮಾನ್ ವೀರೇಂದ್ರಪಾಟೀಲರು ಮುಖ್ಯಮಂತ್ರಿಗಳಾಗಿದ್ದಾಗ ಅವರಿಗೆ ಹೇಳಿ 30 ಕೋಟಿ 16 ಲಕ್ಷ ರೂಪಾಯಿಗಳನ್ನು ಉಳಿಸಿದ್ದೇನೆ. ನಮಗೆ ಒಂದು ಐಡಿಯಾ ಬಂದು, ಏನಾದರೂ ಮಾಡಿ ಇದನ್ನು ಉಪಯೋಗ ಮಾಡಿಕೊಳ್ಳಬೇಕೆಂದು ಉದ್ದೇಶವನ್ನು ಇಟ್ಟುಕೊಂಡು, 1 ಲಕ್ಷ ಮನೆಗಳನ್ನು ಕಟ್ಟುವ ಸಲುವಾಗಿ ನಾವು ನಾಲ್ಕು ವರ್ಷಗಳ ಯೋಜನೆಯನ್ನು ಹಾಕಿಕೊಂಡಿದ್ದೇವೆ.

ಶ್ರೀ ವಾಟಾಳ್ ನಾಗರಾಜ್ : ಹಣವನ್ನು ಎಷ್ಟು ಬಿಡುಗಡೆ ಮಾಡಿದ್ದೀರಿ? ಆ ಹಣವನ್ನು ಎಲ್ಲಿ ಇಟ್ಟಿದ್ದೀರಿ? ಯಾವ್ಯಾವ ಊರಿನಲ್ಲಿ ಮನೆಗಳನ್ನು ಕಟ್ಟಿಸಿದ್ದೀರಿ? ಎಲ್ಲೆಲ್ಲಿ ಅಡಿಪಾಯಗಳನ್ನು ಹಾಕಿಸಿದ್ದೀರಿ? ಎಷ್ಟು ಕಲ್ಲುಗಳನ್ನು ಹಾಕಿದ್ದೀರಿ? ಮಣ್ಣು ಎಷ್ಟು ಹಾಕಿದ್ದೀರಿ? ಮನೆಗಳಿಗೆ ಕಿಟಕಿ ಬಾಗಿಲುಗಳನ್ನು ಹಾಕಿಸಿದ್ದೀರಾ? ಅದನ್ನು ದಯವಿಟ್ಟು ಹೇಳಿ ಸ್ವಾಮಿ?

Mr. SPEAKER : The Bachelor Miniser needs my total protection.

ಶ್ರೀ ಬಿ. ಶಿವಣ್ಣ : ನಾನು ಹೇಳಬೇಕೆಂದರೆ, ಈ ಕಾರ್ಯಕ್ರಮವನ್ನು 1992ರವರೆಗೆ ಮಾಡಬೇಕಾಗಿದೆ. ನಾವು ಒಂದು ಲಕ್ಷ ಮನೆಗಳನ್ನು ಕಟ್ಟುವುದಕ್ಕೆ ಮೊದಲೂ ನಿವೇಶನಗಳನ್ನು ತೆಗೆದುಕೊಳ್ಳಬೇಕಾಗಿದೆ. ಇದನ್ನು ಆರ್‌ಡಿಪಿಆರ್ ಇಲಾಖೆಗೆ ಎಂಟರೆಸ್ಟ್ ಮಾಡಿದ್ದೇವೆ. ಮನೆಗಳನ್ನು ಕಟ್ಟುವುದಕ್ಕೂ ಅವರಿಗೆ ಎಂಟರೆಸ್ಟ್ ಮಾಡಿದ್ದೇವೆ, ನಿವೇಶನಗಳನ್ನು ತೆಗೆದುಕೊಳ್ಳುವುದಕ್ಕೆ ಕೂಡ ವ್ಯವಸ್ಥೆ ಮಾಡಿದ್ದೇವೆ.

ಶ್ರೀ ವಾಟಾಳ್ ನಾಗರಾಜ್ : ತಮ್ಮಲ್ಲಿ ಪ್ರಾಮಾಣಿಕತೆ ಇದೆ. ಆದರೆ ತಮಗೆ ಯಾರೋ ತಪ್ಪು ಮಾಹಿತಿಗಳನ್ನು ಕೊಡುತ್ತಿದ್ದಾರೆ. ಇದು ನಿಜವಾಗಿಯೂ ಬೋಗಸ್‌ಯೆಂದು ಹೇಳುತ್ತಿದ್ದೇನೆ. ಇದರಲ್ಲಿ ಏನೋ ಇದೆ. ನೀವು ಬಹಳ ಒಳ್ಳೆಯ ಮಂತ್ರಿಗಳು. ಅದರ ಬಗ್ಗೆ ನನ್ನದೇನೂ ಇಲ್ಲ.

ಶ್ರೀ ಸಿ. ಬೈರೇಗೌಡ : ಎಲ್ಲಾ ಕಡೆ ನಿವೇಶನಗಳು ಸಿಗುವುದಿಲ್ಲ.ಎಲ್ಲಿ ಮನೆ ನಿವೇಶನಗಳು ಇವೆ ಅಲ್ಲಿ ಮನೆಗಳನ್ನು ಕಟ್ಟಿಸುತ್ತೀರಾ?

ಶ್ರೀ ಪಿ.ಜಿ.ಆರ್. ಸಿಂಧ್ಯ : ನಿಮ್ಮಲ್ಲಿ ತಪ್ಪು ಮಾಹಿತಿ ಇದೆ. ತಾವು ದಯವಿಟ್ಟು ಬೇಸರ ಮಾಡಿಕೊಳ್ಳಬೇಡಿ. ನಿವೇಶನಗಳು ಇಲ್ಲವೆನ್ನುವ ಪ್ರಶ್ನೆಯಲ್ಲ. 11 ಲಕ್ಷ ನಿವೇಶನಗಳನ್ನು ನಾವು ರಾಜ್ಯದಲ್ಲಿ ಹಂಚಿದ್ದೇವೆ. ಅದರಲ್ಲಿ ಮನೆಗಳನ್ನು ಕಟ್ಟಿರುವುದು 3 ಲಕ್ಷ ನಿವೇಶನಗಳಲ್ಲಿ ಮಾತ್ರ. ಇನ್ನು 8 ಲಕ್ಷ ನಿವೇಶನಗಳು ಹಾಗೆಯೇ ಇವೆ. ಎರಡನೆಯದಾಗಿ, ಹಣವನ್ನು ಕೊಡುತ್ತೀರಿ ಎಂದು ಬಡವರು ಗೋಡೆಗಳನ್ನು ಹಾಕಿಕೊಂಡಿದ್ದಾರೆ. ಮಳೆ ಬಂದು ಅವರ ಗೋಡೆಗಳು ಬೀಳುತ್ತಿವೆ. ಅವರಿಗೆ ನೀವು ಹಣವನ್ನು ಕೊಡಿ. ಅರ್ಹತಹವರಿಗೆ ಹಣವನ್ನು ರಿಲೀಸ್ ಮಾಡುತ್ತೇವೆಂದು ಕೊನೆಯ ಪಕ್ಷ ಅದನ್ನಾದರೂ ಹೇಳಿ. ಆ ಆಶ್ವಾಸನೆಯನ್ನು ಕೊಡುತ್ತೀರಾ?

ಶ್ರೀ ಬಿ. ಶಿವಣ್ಣ : 1 ಲಕ್ಷ ಮನೆಗಳನ್ನು ಡಾ: ಅಂಬೇಡ್ಕರ್‌ರವರ ಜನ್ಮಶತಾಬ್ದಿ ಅಂಗವಾಗಿ ಕಟ್ಟುತ್ತೇವೆ. ಬೇರೆ ಜನತಾ ಮನೆಗಳು ನಮಗೆ ಸಂಬಂಧವಿಲ್ಲ.

ಅಧ್ಯಕ್ಷರು : ನೀವು ಪ್ರಾರಂಭ ಮಾಡಿದವು ಬೇರೆ. ಇವರು ನವೆಂಬರ್‌ನಿಂದ ಮನೆಗಳನ್ನು ಕಟ್ಟುತ್ತಾರೆ.

ಶ್ರೀ ವಾಟಾಳ್ ನಾಗರಾಜ್ : ಹಣ ಎಲ್ಲಿದೆ? ಹಣ ಬಿಡುಗಡೆಯಾಗಿಲ್ಲ. ನಿವೇಶನದ ಆಯ್ಕೆ ಆಗಿಲ್ಲ.

ಶ್ರೀ ಬಿ. ಶಿವಣ್ಣ : ನಿವೇಶನ ತೆಗೆದುಕೊಳ್ಳುವ ಸಲುವಾಗಿ 2 ಕೋಟಿ ರೂಪಾಯಿ ಹಣ ಬೇಕು. ಅದನ್ನು ಕೊಡುವುದಕ್ಕೆ ನಾವು ರೆಡಿ ಇದ್ದೇವೆ. ಆಮೇಲೆ ಮನೆ ಕಟ್ಟುವ ಸಲುವಾಗಿ ಆರ್‌ಡಿಪಿಆರ್ ಇಲಾಖೆಗೆ ವಹಿಸಿಕೊಟ್ಟಿದ್ದೇವೆ.

ಅಸಿಸ್ಟೆಂಟ್ ಕಮೀಷನರ್ ಅವರು ಲ್ಯಾಂಡ್ ಅಕ್ವಿಸಿಷನ್ ಮಾಡಿ ನಮಗೆ ಕೊಡಬೇಕು. ಸೋಶಿಯಲ್ ವೆಲ್‌ಫೇರ್ ಡಿಪಾರ್ಟ್‌ಮೆಂಟ್ ಒಂದು ಲಕ್ಷ ಮನೆಗಳನ್ನು ಕಟ್ಟುವ ಪ್ರೋಗ್ರಾಮ್ ಮಾಡಿದೆ. ಆ ದುಡ್ಡು ನಮ್ಮ ಹತ್ತಿರವೇ ಇದೆ.

ಶ್ರೀ ಆರ್. ಎಲ್. ಜಾಲಪ್ಪ : ಒಂದು ಲಕ್ಷ ಮನೆಗಳನ್ನು ಕಟ್ಟಿಸದೇ ಇದ್ದರೆ ನೀವು ರಾಜೀನಾಮೆ ಕೊಡಬೇಕು.

(ಉತ್ತರ ಇಲ್ಲ)

ತೆಂಗಿನ ಮೊಟ್ಟೆಗಳು.

2412 - ಶ್ರೀ ಎಲ್.ಆರ್. ಶಿವರಾಮೇಗೌಡ (ನಾಗಮಂಗಲ) : ಮಾನ್ಯ ಸಣ್ಣ ಕೈಗಾರಿಕಾ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ರಾಜ್ಯದಲ್ಲಿ ಖಿಂಡಸಾರಿ ಸಕ್ಕರೆ ಉದ್ಯಮಗಳು ಉರುವಲಿಗಾಗಿ ತೆಂಗಿನ ಮೊಟ್ಟೆಗಳನ್ನು ಉಪಯೋಗಿಸುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ?

ಆ) ಮೇಲ್ಕಂಡ ವಸ್ತುಗಳು ನಾರು ಉದ್ಯಮಕ್ಕೆ ಅಗತ್ಯವಿರುವ ಕಚ್ಚಾವಸ್ತುಗಳಾಗಿರುವುದರಿಂದ ಇವುಗಳನ್ನು ಇಂಧನ ರೂಪದಲ್ಲಿ ಉಪಯೋಗಿಸುವುದನ್ನು ನಿಷೇಧಿಸಲು ಸರ್ಕಾರ ಕ್ರಮ ಕೈಗೊಳ್ಳಲಿದೆಯೇ?